## ಕಾರ್ಮಿಕ ನ್ಯಾಯಾಲಯ, ಮೈಸೂರು.

**Appl**.:9/2024

ಆರ್.ಡಬ್ಲ್ಯೂ– 1

**ದಿನಾಂಕ 31.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ.ಎ.ಬಿ.ಎನ್. ವಕೀಲರ ಪರವಾಗಿ ಶ್ರೀಮತಿ.ಎಂ.ಎಂ. ವಕೀಲರಿಂದ :**

**Ex**.**R**1–Certified copy of Order of WP No.5363/2019 and WP No.1687/2016

**Ex**.**R**2–Certified copy of Cheque drawn details dated.25.02.2005

**Ex**.**R**3–Certified copy of gratuity payment details dated.19.08.2009

**Ex**.**R**4–Certified copy of Leave encashment details dated.08.09.2009

**Ex**.**R**5–Certified copy of Acquitance roll of the establishment dated.04.06.2008

**Ex**.**R**6–Certified copy of Cheque received receipt dated.04.06.2008

**Ex**.**R**7–Certified copy of letter of Assistant Labour Commissioner dated.21.11.2015

**Ex**.**R**8–Certified copy of Order in App.No.9/1996 before the Court of Labour Court, Mysusu dated.12.01.2005

**Ex**.**R**9–Certified copy of Order in PGA No.18/2008 before the ALC, Mangaluru dated.11.01.2010

**Ex**.**R**10–Certified copy of Order in App.21/2009 before the Labour Court, Mysuru dated.16.10.2015.

ಸದರಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿ.ಆರ್–1 ರಿಂದ 10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರಿಂದ**

ಅರ್ಜಿದಾರರು 1982 ರಿಂದ 2009 ರವರೆಗೆ ನಮ್ಮ ಸಂಸ್ಥೆಯ ಬೇರೆ ಬೇರ ವಿಭಾಗಗಳಲ್ಲಿ ಕೆಲಸ ಮಾಡಿರುತ್ತಾರೆ. ಅರ್ಜಿದಾರರು ಬೆಂಗಳೂರು ಸೆಂಟ್ರಲ್ ವಿಭಾಗ, ಮೈಸೂರು ವಿಭಾಗ, ಮಂಗಳೂರು ವಿಭಾಗಗಳಲ್ಲಿ ಕೆಲಸ ಮಾಡಿರುತ್ತಾರೆ. ಸದರಿ ವಿಭಾಗಗಳಲ್ಲಿ ಅರ್ಜಿದಾರರು ಎಷ್ಟು ಎಷ್ಟು ವರ್ಷ ಕೆಲಸ ನಿರ್ವಹಿಸಿರುತ್ತಾರೆ ಎಂಬುದು ನನಗೆ ನಿಖರವಾಗಿ ಗೊತ್ತಿಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ಯಾವ ಆದೇಶಗಳು ಯಾವ ದಿನಾಂಕಗಳಲ್ಲಿ ಆಗಿರುತ್ತದೆ ಎಂದು ದಾಖಲೆಗಳನ್ನು ನೋಡಿ ಹೇಳಬಹುದು. ಮಂಗಳೂರು ವಿಭಾಗದಲ್ಲಿ ಅರ್ಜಿದಾರರು 1991 ರಿಂದ 2005 ರವರೆಗೆ ಕೆಲಸ ಮಾಡಿರುತ್ತಾರೆ. ಆದರೆ ಯಾವ ಘಟಕದಲ್ಲಿ ಕೆಲಸ ಮಾಡಿರುತ್ತಾರೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. 1991 ರಲ್ಲಿ ಯಾವ ಘಟಕದಲ್ಲಿ ಕೆಲಸ ಮಾಡಿರುತ್ತಾರೆ ಎಂಬ ಮಾಹಿತಿ ಇಲ್ಲ. Gratuity, Encasement, PF, and salary arrears ಗಳನ್ನು 2005, 2008 ಹಾಗೂ 2009 ರಲ್ಲಿ ನೀಡಿರುತ್ತೇವೆ. 2005 ರಲ್ಲಿ ಅರ್ಜಿದಾರರಿಗೆ ಸಂಬಳವನ್ನು ಯಾವ ಘಟಕದಲ್ಲಿ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ವೇತನ ಚೀಟಿಯನ್ನು ಹಾಜರು ಮಾಡಿರುತ್ತೇನೆ ಎನ್ನುತ್ತಾರೆ. ಅರ್ಜಿದಾರರು ಎದುರುದಾರರ ಘಟಕದಲ್ಲಿ ಕೆಲಸಕ್ಕೆ ಸೇರಿಕೊಂಡಿರುವ ದಿನಾಂಕ ಹೇಳಲು ಆಗುತ್ತದೇಯೇ ಎಂದರೆ ಕಡತವನ್ನು ನೋಡಿ ಹೇಳಬೇಕಾಗುತ್ತದೆ ಎನ್ನುತ್ತಾರೆ.

1982 ರಿಂದ ಅರ್ಜಿದಾರರಿಗೆ ಯಾವ ಯಾವ ತಿಂಗಳಿನಲ್ಲಿ ಎಷ್ಟು ಸಂಬಳ ನೀಡಿರುತ್ತೇವೆ ಎಂದು ಹೇಳಲು ಆಗುವುದಿಲ್ಲ. 1982 ರಿಂದ 2005 ರವರೆಗೆ ಅರ್ಜಿದಾರರು ಕೆಲಸ ಮಾಡಿರುವ ಘಟಕಗಳ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. 2005 ರಲ್ಲಿ ಅರ್ಜಿದಾರರಿಗೆ ಭವಿಷ್ಯನಿಧಿ ನೀಡಿರುವ ಬಗ್ಗೆ ದಾಖಲೆ ಹಾಜರು ಮಾಡಿರುತ್ತೇನೆ. ಅರ್ಜಿದಾರರನ್ನು ಯಾಕೆ ವಜಾ ಮಾಡಿರುತ್ತೇವೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಅದು ಆಡಳಿತ ವರ್ಗದವರಿಗೆ ಸಂಬಂಧಪಟ್ಟ ವಿಷಯವಾಗಿರುತ್ತದೆ ಎನ್ನುತ್ತಾರೆ. ವಜಾಗೊಂಡ ನಂತರ ಅರ್ಜಿದಾರರಿಗೆ ಕೆಲಸ ನೀಡಿರುತ್ತಾರೆ ಎಂದರೆ ಸಾಕ್ಷಿ 2009 ರ ವೇಳೆಗೆ ಅವರ ಅವಧಿ ಮುಗಿದಿದ್ದ ಕಾರಣ ಅವರು ನಿವೃತ್ತಿ ಹೊಂದಿದ್ದರು, ಅವರಿಗೆ gratuity ಹಣವನ್ನು ನೀಡಿರುತ್ತೇವೆ ಎನ್ನುತ್ತಾರೆ. ಅರ್ಜಿದಾರರಿಗೆ

ಅವರ ಸಂಪೂರ್ಣ ಅವಧಿಯ gratuity ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 1982 ರಿಂದ 2005 ರವರೆಗೆ ಅರ್ಜಿದಾರರು ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಿಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹಿಂಬಾಕಿ ವೇತನವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿ 2 ವರ್ಷದ ಹಿಂಬಾಕಿ ವೇತವನ್ನು ಸೇರಿಸಿ ಕೊಡಬೇಕು ಎಂದು ಆದೇಶವಾಗಿತ್ತು ಎಂದರೆ ಸರಿಯಲ್ಲ. 1982 ನೇ ಇಸವಿಯಿಂದ ಅರ್ಜಿದಾರರ ಸಂಬಳ ಎಷ್ಟು ಇತ್ತು ಎಂದು ನನಗೆ ಮಾಹಿತಿ ಇಲ್ಲ. 2009 ನೇ ಇಸವಿಯಲ್ಲಿ ನಿವೃತ್ತಿಯನ್ನು ಯಾವ ಆಧಾರದ ಮೇಲೆ ನೀಡಿದ್ದೀರ ಎಂದರೆ ನ್ಯಾಯಾಲಯದ ಆದೇಶದ ಮೇರೆಗೆ ನೀಡಿದ್ದೇವು ಎನ್ನುತ್ತಾರೆ. 1982 ರಿಂದ ನನ್ನನ್ನು ಯಾವ ದಿನಾಂಕದಲ್ಲಿ ವಜಾ ಮಾಡಿದ್ದರು ಹಾಗೂ ಯಾವ ದಿನಾಂಕದಲ್ಲಿ ಕೆಲಸಕ್ಕೆ ಪುನರ್ ನೇಮಕ ಮಾಡಿಕೊಂಡಿದ್ದರು ಎಂಬುದರ ಬಗ್ಗೆ ಹೇಳಲು ಆಗುವುದಿಲ್ಲ. 2014 ರಲ್ಲಿ ಕಾರ್ಮಿಕ ನ್ಯಾಯಾಲಯದಲ್ಲಿ ಆಗಿದ್ದ ಆದೇಶದ ಪ್ರಕಾರ ಹಣವನ್ನು ಪಾವತಿ ಮಾಡಿದ್ದೀರ ಎಂದರೆ ನಾವು ಪಾವತಿ ಮಾಡಿದ್ದೇವು ಎನ್ನುತ್ತಾರೆ. 2009 ರಲ್ಲಿ ಕಾರ್ಮಿಕ ನ್ಯಾಯಾಲಯದ ಆದೇಶದ ಪ್ರಕಾರ ನಿವೃತ್ತಿ ಆದೇಶ ನೀಡಿರುತ್ತೇವೆ.

ಕಾರ್ಮಿಕ ನ್ಯಾಯಾಲಯದ ಆದೇಶದ ಪ್ರಕಾರ ಅರ್ಜಿದಾರರನ್ನು ನಿವೃತ್ತಿ ಮಾಡಿಲ್ಲ ಎಂದರೆ ಸರಿಯಲ್ಲ. 2009 ನೇ ಇಸವಿಯಲ್ಲಿ ಅರ್ಜಿದಾರರು ಒಬ್ಬರನ್ನು ಏಕೆ ವಜಾ ಮಾಡಿದ್ದೀರ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಹೇಳಿಕೆಗಳು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹೇಳಿರುವ ವಿಚಾರಗಳು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**